





ಬಾಳೆಹಣ್ಣಿನ ಆಕಾರದ ಲಿಂಬೆ, ಮಾದಲ ಕಾಡುಲಿಂಬೆ, ಡಾರ್ಜಲಿಂಗ್ ಕಿತ್ತಳೆ– ಹೀಗೆ ನೋಡುತ್ತಾ ಸಾಗಿದರೆ ಅಲ್ಲಿರುವ ವೈವಿಧ್ಯ ಬೆರಗು ಹುಟ್ಟಿಸುತ್ತದೆ. ಅವುಗಳನ್ನು ನೋಡುತ್ತಾ ಮುಂದೆ ಸಾಗಿದರೆ ವೈವಿಧ್ಯಮಯ ಪೇರಳೆಗಳು ಕಾಣಿಸಿದವು. ಕೆ.ಜಿ. ಪೇರಳೆಯಂತೂ ಒಂದೇ ಪೇರಳೆ ಹಣ್ಣು ಒಂದು ಕಿಲೋ ತೂಗುತ್ತಿತ್ತು! ಅದರಲ್ಲೂ ಎಷ್ಟೊಂದು ವಿಧ! ಕಪ್ಪು, ಕೆಂಪು, ಬೀಜ ರಹಿತ ಪೇರಳೆ, ಚೈನಾ, ಬ್ಯಾಂಕಾಕ್ ಪೇರಳೆ. ಪೇರಳೆಯಲ್ಲಿ ಇಷ್ಟೊಂದು ವಿಧಗಳಿವೆ ಎನ್ನುವುದು ನನಗೆ ಅವತ್ತೇ ಗೊತ್ತಾದದ್ದು.

ಮೃತ್ಯುಂಜಯ ಅವರು ವೃತ್ತಿಯಲ್ಲಿ ಸರ್ಜನ್. ಸಾವಿರಾರು ಶಸ್ತ್ರಚಿಕಿತ್ಸೆಗಳನ್ನು ಮಾಡಿದ್ದಾರೆ. ಹಾಗೆಯೇ ತಮ್ಮ ತೋಟದಲ್ಲೂ ಈ ಕಾಯಕ ಮುಂದುವರಿಸಿದ್ದಾರೆ. ಒಂದು ಹಲಸಿಗೆ ಸುಮಾರು 20 ಬೇರೆ ಬೇರೆ ಕಡೆಗಳಿಂದ ತಂದ ರೆಂಬೆಗಳನ್ನು ಜೋಡಿಸಿ ಕಸಿ ಮಾಡಿದ್ದಾರೆ. ಆ ಒಂದೇ ಮರದಲ್ಲಿ ಹಳದಿ, ಬಿಳಿ, ಮೇಣವಿಲ್ಲದ ನಾನಾ ರೀತಿಯ ಹಲಸಿನ ಹಣ್ಣುಗಳು ಬೆಳೆದಿವೆ!

ಒಂದು ಮಾವಿನ ಗಿಡಕ್ಕೂ ಹಾಗೆಯೇ ನೂರಾಒಂದು ಕಡೆಗಳಿಂದ ರೆಂಬೆಗಳನ್ನು ಕತ್ತರಿಸಿ ತಂದು ಕಸಿ ಮಾಡಿದ್ದಾರೆ. ಆ ಮರದಲ್ಲೂ ಎಲ್ಲವೂ ಚಿಗುರೊಡೆದಿದ್ದ 50ರಿಂದ 90ರಷ್ಟು ವಿವಿಧ ರುಚಿಯ ಮಾವಿನ ಹಣ್ಣುಗಳು ಬಿಡುವುದು ಖಂಡಿತ ಎನ್ನುತ್ತಾರೆ.

ಮೃತ್ಯುಂಜಯ ಅವರ ಔಷಧಿ ಸಸ್ಯಗಳ ಸಂಗ್ರಹವೂ ಅಗಾಧವಾಗಿದೆ. 50ಕ್ಕೂ ಹೆಚ್ಚು ಬಗೆಯ ಔಷಧಿ ಸಸ್ಯಗಳು ಈ ತೋಟದಲ್ಲಿವೆ. ಲೋಳೆರಸ, ದೊಡ್ಡಪತ್ರೆ, ಚಕ್ರಮುನಿ, ನಾಗದಾಳ, ಇನ್ಸುಲಿನ್‌ಗಿಡ, ಒಂದೆಲಗ, ಮಜ್ಜಿಗೆಹುಲ್ಲು, ಲಾವಂಚ, ಭೃಂಗರಾಜ, ಬಿಳಿ ಮತ್ತು ಕೆಂಪು ಬಸಳೆ, ಬಿಲ್ವ, ನುಗ್ಗೆ, ಕಳಗಲು, ನೆಲ್ಲಿ ಶುಂಠಿ, ತುಂಬೆಗಿಡ, ನೆಲ ನೆಲ್ಲಿ, ನೇರಳೆ, ಆಲ್‌ಸ್ಪೈಯಿಸ್– ಹೀಗೆ ಇಲ್ಲಿಲ್ಲದ ಔಷಧಿ ಸಸ್ಯಗಳೇ ಇಲ್ಲ ಎನ್ನುವಂತಿದೆ. ಒಂದು ಎಲೆಯನ್ನು ಕೊಟ್ಟು 'ತಿನ್ನಿ' ಎಂದರು. ಡಾಕ್ಟರೇ ಕೊಟ್ಟಾಗ ಹಿಂಜರಿಯುವ ಪ್ರಶ್ನೆಯೇ ಇಲ್ಲ. ತಿಂದು ನೋಡಿದರೆ ಬೆಳ್ಳುಳ್ಳಿ ತಿಂದ ಹಾಗೆ ಅನಿಸಿತು. ಇದೂ ಒಂದು ರೀತಿಯ ಔಷಧ ಸಸ್ಯ.

ವೃತ್ತಿ ಮತ್ತು ಪ್ರವೃತ್ತಿ ಎರಡನ್ನೂ ಹೀಗೆ ತೂಗಿಸಿಕೊಂಡು ಹೋಗುವವರು ಇತ್ತೀಚೆಗೆ ಕಡಿಮೆ ಆಗುತ್ತಿದ್ದಾರೆ. ವೈದ್ಯರೆಂದ ಮೇಲೆ ಅವರಿಗೆ ಪುರುಸೊತ್ತು ಸಿಗುವುದೂ ಕಷ್ಟ. ಆದರೆ ಮೃತ್ಯುಂಜಯ ಅವರಿಗೆ ಗಿಡಮರಗಳ ಮೇಲಿನ ಪ್ರೀತಿ ವ್ಯಕ್ತಿತ್ವದಲ್ಲೇ ಮಿಳಿತವಾಗಿದೆ ಎನ್ನಿಸುತ್ತದೆ. ಅವರು ಈ ಗಿಡಗಳನ್ನು ಮುಟ್ಟುತ್ತಾ, ಮೂಸುತ್ತಾ ಅವುಗಳ ಜತೆಗ ಸಂಭಾಷಿಸುತ್ತಾ ಪ್ರೀತಿಯ ಸೆಲೆಯನ್ನೇ ಹರಿಸುತ್ತಾರೆ. ಮರಗಿಡಗಳಿಗೆ ಸಂಬಂಧಿಸಿ ತುಂಬ ಭಾವುಕರು ಅವರು. ಆ ಪ್ರೀತಿಯಿಂದಲೇ ಇಷ್ಟೆಲ್ಲ ವೈವಿಧ್ಯಮಯ ತಳಿಗಳ ಗಿಡಗಳನ್ನು ಬೆಳೆಸಲು ಅವರಿಗೆ ಸಾಧ್ಯವಾಗಿದೆ ಅನ್ನಿಸುತ್ತದೆ.

ಪ್ರತಿಸಲ ವಿದೇಶ ಪ್ರವಾಸಕ್ಕೆ ಹೊರಟಾಗಲೂ ಅಲ್ಲಿಂದ ತರಬಹುದಾದ ಹೂ, ಹಣ್ಣು ಮತ್ತು ಔಷಧೀಯ ಗಿಡಗಳ ಪಟ್ಟಿಯನ್ನು ಮಾಡಿಕೊಂಡೇ ಹೋಗುತ್ತಾರೆ. 'ಎಲ್ಲರೂ ಪ್ರವಾಸ ಮಾಡುವುದು ಸುಂದರ ದೃಶ್ಯಗಳನ್ನು ನೋಡುವುದಕ್ಕೆ. ನಾನು ಪ್ರವಾಸ ಮಾಡುವುದು ನನ್ನ ಪ್ರೀತಿಯ ಗಿಡ ಮರಗಳನ್ನು ನೋಡುವುದಕ್ಕೆ' ಎಂದು ನಗುತ್ತಾರೆ ಅವರು. ಕೇವಲ 120 ಮತ್ತು 90 ಅಡಿ ಸುತ್ತಳತೆಯ ಜಾಗದಲ್ಲಿ ಹೀಗೆ ಅಪೂರ್ವ ತೋಟವೊಂದನ್ನು ಎಬ್ಬಿಸುವುದು ಅಷ್ಟು ಸುಲಭದ ಕೆಲಸವಲ್ಲ. ಅವರ ಈ ಸಸ್ಯಕಾಶಿಯನ್ನು ನೋಡಿದಾಗ ಎಂಥವರಿಗೂ ಹೃದಯ ತುಂಬಿ ಬರುತ್ತದೆ. (ವೈದ್ಯರ ಸಂಪರ್ಕ ನಂಬರ್– 94489 58809.)